# ಹೂವರಸಿಯ ಬಲ್ಲಿರಾ?

■ ಡಾ. ಹರ್ಷಿತಾ ಎಂ.ಎಸ್.







ಹಳದಿ ಬಣ್ಣದ ದಾಸವಾಳ ಹೂವಿನಂತೆ ಕಂಗೊಳಿಸುವ ಹೂವು ಹಾಗೂ ಅಶ್ವತ್ಥ ಎಲೆಯನ್ನು ಹೋಲುವ ಎಲೆಗಳನ್ನು ಹೊಂದಿರುವ ಈ ಸಸ್ಯದ ಹೆಸರು ಹೂವರಸಿ. ಇದನ್ನು ಅಡವಿ ಬಂಡೆ ಮರ, ಗಂಡರಳಿ, ಜೋಗಿಯರಳೆ, ಬುಗರಿ ಮರ ಎಂದೂ ಕರೆಯುತ್ತಾರೆ.

ಇದರ ವೈಜ್ಞಾನಿಕ ಹೆಸರು ತೆಸ್ಪೆಸಿಯಾ ಪೆಂಪುಲ್ನಿಯಾ ಎಂದಾಗಿದ್ದು ಇದು ಮಾಲ್ವೇಸಿಯೇ ಸಸ್ಯ ಕುಟುಂಬಕ್ಕೆ ಸೇರಿದ್ದಾಗಿದೆ. ಆಂಗ್ಲ ಭಾಷೆಯಲ್ಲಿ ಇದಕ್ಕೆ ಇಂಡಿಯನ್ ಟ್ಯುಲಿಪ್ ಟ್ರೀ, ಪೋರ್ಟಿಯಾ ಟ್ರೀ, ಪೆಸಿಫಿಕ್ ರೋಸ್ ವುಡ್ ಟ್ರೀ ಎಂಬೆಲ್ಲಾ ಹೆಸರಿವೆ. ಸಂಸ್ಕೃತದಲ್ಲಿ ಪಾರೀಷ, ಕಪೀತನ, ಕಮಂಡಲು ಎಂದು ಕರೆಯಲ್ಪಡುತ್ತದೆ.

ಇದು ಭಾರತ, ಆಫ್ರಿಕಾ ಮತ್ತು ಪೆಸಿಫಿಕ್ ದ್ವೀಪ ಸಮೂಹಕ್ಕೆ ಸೇರಿದ್ದಾಗಿದೆ. ಈಗ ವಿಶ್ವದ ವಿವಿಧ ಉಷ್ಣವಲಯ ಪ್ರದೇಶಗಳಲ್ಲಿ ಇದನ್ನು ಕಾಣಬಹುದು. ಭಾರತದಲ್ಲಿ ಪಶ್ಚಿಮ ಬಂಗಾಳದಿಂದ ತೊಡಗಿ ಅಂಡಮಾನ್ ನಿಕೋಬಾರ್ ದ್ವೀಪಗಳ ಕರಾವಳಿ ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಮಡಗಾಸ್ಕರ್, ತೈವಾನ್ ಮೊದಲಾದ ದೇಶಗಳಲ್ಲಿ ಇದನ್ನು ಹಡಗುಗಳ ತಯಾರಿಕೆಗೆ ಬಳಸಲಾಗುತ್ತಿತ್ತು. ಹವಾಯಿ ದ್ವೀಪಗಳಲ್ಲಿ ಇದನ್ನು ಉಪಯೋಗಿಸಿ ಪಾತ್ರೆಗಳನ್ನು ತಯಾರಿಸುತ್ತಿದ್ದರು. ಭಾರತದಲ್ಲಿ ವಿವಿಧ ಪಾರಂಪರಿಕ ವೈದ್ಯ ಪದ್ಧತಿಗಳಲ್ಲಿ ಔಷಧಿಯಾಗಿ ಬಳಸಲಾಗುತ್ತಿದೆ. ತಮಿಳುನಾಡಿನ ತವಿಲ್ ಎಂಬ ಡೋಲಿನಂತಹ ಸಂಗೀತ ಉಪಕರಣದ ತಯಾರಿಯಲ್ಲೂ ಇದನ್ನು ಬಳಸುತ್ತಾರೆ. ಹಾಗೆಯೇ ಕೆಲವೊಂದು ಧಾರ್ಮಿಕ ಕಾರ್ಯಕ್ರಮಗಳಲ್ಲೂ ಉಪಯೋಗಿಸುತ್ತಾರೆ.

ಹೂವರಸಿ ಮರವು 20–33 ಅಡಿಯಷ್ಟು ಎತ್ತರಕ್ಕೆ ಬೆಳೆಯುತ್ತದೆ. ಕಾಂಡವು 8–12 ಇಂಚಿನಷ್ಟು ವ್ಯಾಸವನ್ನು ಹೊಂದಬಹುದು. ಇದರ ಎಲೆಯು ಹೃದಯಾಕಾರದಿಂದ ಕೂಡಿದೆ. ಹಳದಿ ಬಣ್ಣದ ಇದರ ಹೂವು ಗಂಟೆಯಾಕಾರದಲ್ಲಿದ್ದು ಮಧ್ಯದಲ್ಲಿ ನೇರಳೆ ಬಣ್ಣದಿಂದ ಕಂಗೊಳಿಸುತ್ತದೆ. ಇದರ ಕಾಯಿಗಳು ಬುಗರಿಯಾಕಾರದಲ್ಲಿವೆ.

ಆಯುರ್ವೇದ ಶಾಸ್ತ್ರದ ಪ್ರಕಾರ ಇದನ್ನು ಪಂಚವಲ್ಕಲ (ಐದು ಶ್ರೇಷ್ಠ ತೊಗಟೆ) ಹಾಗೂ ಪಂಚಕ್ಷೀರಿವೃಕ್ಷ (ಐದು ಶ್ರೇಷ್ಠ ಹಾಲು ಒಸರುವ ಮರ)ಗಳಲ್ಲೊಂದಾಗಿ ಪರಿಗಣಿಸಲಾಗಿದೆ. ಇದು ಅಧಿಕ ರಕ್ತಸ್ರಾವ, ಮೂತ್ರ ದೋಷ, ಚರ್ಮ ರೋಗ, ಯೋನಿರೋಗ, ಮಧುಮೇಹ, ವ್ರಣ ಮೊದಲಾದ ವ್ಯಾಧಿಗಳ ಚಿಕಿತ್ಸೆಯಲ್ಲಿ ಪರಿಣಾಮಕಾರಿಯಾಗಿದೆ ಎಂದು ಉಲ್ಲೇಖಿಸಲಾಗಿದೆ.

ಸದಾ ಹಸಿರಾಗಿದ್ದು ತಂಪಾದ ನೆರಳನ್ನು ಕೊಡುವ ಹಾಗೆಯೇ ಶೀಘ್ರವಾಗಿ ಬೆಳೆಯಬಲ್ಲ ಈ ಮರವು ಉದ್ಯಾನವನಗಳಲ್ಲಿ ಹಾಗೂ ರಸ್ತೆ ಬದಿಗಳಲ್ಲಿ ನೆಡಲು ಸೂಕ್ತವಾಗಿದೆ. ■

